FIRST CATECHISM

OF

Canarese Grammar

ಕಂನಡ ಬಾಲವ್ಯಾಕರಣ.

ಮೊದಲನೆ ಪ್ರಶ್ನೋತ್ತರಸಂವಾದ.

SECOND REVISED EDITION.

PUBLISHED BY ORDER OF THE DIRECTOR
OF PUBLIC INSTRUCTION.

MANGALORE:
GOVERNMENT SCHOOL-BOOK DEPOT.
1865.

FIRST CATECHISM

OF

Canarese Grammar

ಕಂನಡ ಬಾಲವ್ಯಾಕರಣ.

SECOND REVISED EDITION.
PUBLISHED BY ORDER OF THE DIRECTOR
OF PUBLIC INSTRUCTION.

MANGALORE:
GOVERNMENT SCHOOL-BOOK DEPOT.
1865.

Printed by Plebst & Stolz,

Basel Mission Press, Mangalore.

ಕಂನಡ ವ್ಯಾಕರಣದ ಪ್ರಶ್ನೋತ್ತರ

1. ಪ್ರಶ್ನೆ. ಕಂಡನ ವ್ಯಾಕರಣವೆಂದರೇನು?

ಉತ್ತರ. ಕಂನಡ ಭಾಷೆಯ ವಿಧಿಗಳ ವಿವರವು.

2. ಪ್ರ. ಅದಕ್ಕೆ ಖಂಡಗಳೆಷ್ಟು?

ಉ. ಅಕ್ಷರಖಂಡ, ಶಬ್ದಖಂಡ, ವಾಕ್ಯಖಂಡ ಎಂಬ ಮೂರು.

ಅಕ್ಷರಖಂಡ.

I. ಸಂಜ್ಞಾಪ್ರಕರಣ.

3. ಪ್ರ. "ಅಕ್ಷರ"ವೆಂದರೇನು?

ಉ. ಮಾತಾಡುವದರಲ್ಲಿ ಒಂದೇ ಉಚ್ಚಾರಣೆಯಿಂದ ಹುಟ್ಟುವ ಶಬ್ದವೂ, ಅಂಥಾ ಶಬ್ದವನ್ನು ಬರೆಯುವದಕ್ಕೆ ಹಿರಿಯರು ಕಲ್ಪಿಸಿದ ಲಿಪಿಸಂಜ್ಞೆಯೂ ಅಕ್ಷರವೆಂದೆನ್ನಿಸುವದು.

4. ಪ್ರ. ಕಂನಡ ಅಕ್ಷರಗಳು ಎಷ್ಟು ವಿಧವು?

ಉ. "ವರ್ಣಾಕ್ಷರ" "ಕಾಗುಣಿತಾಕ್ಷರ", "ಒತ್ತಕ್ಷರ"ವೆಂಬ 3 ವಿಧವು.

5. ಪ್ರ. ವರ್ಣಗಳು ಯಾವವು?

ಉ. ಅಕ್ಷರಮಾಲೆಗೆ 52 ವರ್ಣಗಳು, ಅವು ಯಾವವಂದರೆ:

ಅ ಆ ಇ ಈ ಉ ಊ
ಋ ೠ ಌ ೡ ಎ ಏ
ಐ ಒ ಓ ಔ

ಅಂ ಅಃ

ಕ ಖ ಗ ಘ(ಘ)ಙ
ಚ ಛ ಜ ಝ ಞ
ಟ ಠ ಡ ಢ ಣ
ತ ಥ ದ ಧ ನ
ಪ ಫ ಬ ಭ ಮ

ಯ ರ ಲ ವ ಶ
ಷ(ಷ)ಸ ಹ (ಹ) ಳ

---

6. ಪ್ರ. ವರ್ಣಗಳಲ್ಲಿ ಭೇದಗಳು ಎಷ್ಟು?
ಉ. ಸ್ವರಗಳು, ವ್ಯಂಜನಗಳು, ಈ 2 ಭೇದಗಳು.

7. ಪ್ರ. ಸ್ವರಗಳು ಯಾವವು?
ಉ. "ಅ"ಕಾರ ಹಿಡಿದು "ಔ"ಕಾರದ ವರಿಗೆ 16 ಸ್ವರಗಳು.

8. ಪ್ರ. ವ್ಯಂಜನಗಳು ಯಾವವು?
ಉ. "ಕ"ಕಾರ ಹಿಡಿದು "ಳ"ಕಾರದ ವರಿಗೆ 34 ವ್ಯಂಜನಗಳು.

9. ಪ್ರ. ಸ್ವರಗಳು ಎಷ್ಟು ವಿಧವು?
ಉ. ಹ್ರಸ್ವ, ದೀರ್ಘ ಎಂಬ 2 ವಿಧವು.

"ಅ ಇ ಉ ಋ ಎ ಒ" ಇವು ಹ್ರಸ್ವಗಳು.
"ಆ ಈ ಊ ಏ ಐ ಓ ಔ" ಇವು ದೀರ್ಘಗಳು.

10. ಪ್ರ. ವ್ಯಂಜನಗಳು ಎಷ್ಟು ವಿಧವು?
ಉ. ವರ್ಗೀಯಗಳು ಅವರ್ಗೀಯಗಳು, ಈ 2 ವಿಧವು. ವರ್ಗೀಯಗಳು ಯಾವವಂದರೆ — "ಕ"ವರ್ಗ, "ಚ"ವರ್ಗ, "ಟ"ವರ್ಗ, "ತ"ವರ್ಗ, "ಪ"ವರ್ಗ, ಈ 5 ವರ್ಗಗಳು. ಅವರ್ಗೀಯಗಳು ಯಾವವಂದರೆ—"ಯ"ಕಾರಾದಿ "ಶ"ಕಾರಾದಿ ಈ 2ಗುಂಪುಗಳು.

11. ಪ್ರ. ವರ್ಗೀಯಗಳ ಒಂದೊಂದು ವರ್ಗದ ವರ್ಣಗಳು ಎಷ್ಟು ವಿಧವು?
ಉ. ಒಂದೊಂದು ವರ್ಗಕ್ಕೆ 2 "ಪರುಷ" 2 "ಸರಳ" 1 "ಅನುನಾಸಿಕ" ಈ ಪ್ರಕಾರ 5 ವರ್ಣಗಳು ಉಂಟು. ಪರುಷಾಕ್ಷರಗಳಲ್ಲಿಯೂ ಸರಳಾಕ್ಷರಗಳಲ್ಲಿಯೂ 1ನೇದು "ಅಲ್ಪಪ್ರಾಣ"ವೆಂದು 2ನೇದು "ಮಹಾಪ್ರಾಣ"ವೆಂದು ವರ್ಣಿಸುವದು.

12. ಪ್ರ. ಸೊನ್ನೆಗೆ (ಂ) ಹೆಸರೇನು?
ಉ. ಅದಕ್ಕೆ "ಅನುಸ್ವಾರ"ವೆಂದೂ "ಬಿಂದು"ವೆಂದೂ ಹೆಸರು.

13. ಪ್ರ. ಎರಡು ಸೊನ್ನೆಗೆ (ಃ) ಹೆಸರೇನು?
ಉ. ಅದಕ್ಕೆ ವಿಸರ್ಗವೆಂಬ ಹೆಸರು.

14. ಪ್ರ. ಕಾಗುಣಿತಾಕ್ಷರಗಳು ಯಾವವು?
ಉ. ವ್ಯಂಜನಗಳ ಮೇಲೆ ಸ್ವರಗಳ ಸಂಜ್ಞೆಗಳನ್ನು ಹತ್ತಿಸುವದರಿಂದ ಕಾಗುಣಿತಾಕ್ಷರಗಳು ಆಗುವವು. ಉದಾ. ಕ ಕಾ ಕಿ ಕೀ ಕು ಕೂ ಕೃ ಕೆ ಕೇ ಕೈ ಕೊ (ಕೋ) ಕೌ.

15. ಪ್ರ. ವತ್ತಕ್ಷರಗಳು ಯಾವವು?
ಉ. ಎರಡು ವ್ಯಂಜನಗಳು ನಡುವೆ ಸ್ವರವಿಲ್ಲದೆ ಸಂಯುಕ್ತವಾದರೆ

ಅವುಗಳಲ್ಲಿ ಒಂದನ್ನು ಮತ್ತೊಂದರ ಕೆಳಗೆ ಒತ್ತಾಗಿ ಬರೆಯುವದರಿಂದ ಒತ್ತಕ್ಷರಗಳು ಆಗುವವು. ಉದಾ. ಕ್ಕ, ಖ್ಖ, ಟ್ಟ, ತ್ತ, ದ್ದ, ನ್ನ, ಪ್ಪ, ಮ್ಮ, ಯ್ಯ, ರ್ರ.

II. ಸಂಧಿಪ್ರಕರಣ.

16. ಪ್ರ. ಸಂಧಿ ಯೆಂದರೇನು?

ಉ. ಕೂಡಿ ನುಡಿಯುವ ಎರಡು ಶಬ್ದಗಳ ಉಚ್ಚಾರಣೆಯು ಶುಲಭವಾಗುವ ಹಾಗೆ ಪೂರ್ವಶಬ್ದದ ಕಡೇ ಅಕ್ಷರಕ್ಕೆ ಪರಶಬ್ದದ ಆದಿ ಅಕ್ಷರವನ್ನು ಕೂಡಿಸುವದೇ ಸಂಧಿ ಎಂದೆನ್ನಿಸುವದು.

17. ಪ್ರ. ಸಂಧಿ ಮಾಡುವ ಸಾಧನಗಳು ಯಾವವು?

ಉ. "ಲೋಪ", "ಆಗಮ", "ಆದೇಶ",ವೆಂಬ 3 ಸಂಧಿಸಾಧನಗಳು.

"ಲೋಪ"ವೆಂದರೆ — ಶಬ್ದದಲ್ಲಿ ಮುಂಚೆ ಇದ್ದ ಅಕ್ಷರಗಳೊಳಗೆ ಒಂದು ಕಾಣದೇ ಹೋಗುವದೇ. — ಉದಾ. [ಮಾತು-ಇಲ್ಲ=] ಮಾತಿಲ್ಲ.

"ಆಗಮ"ವೆಂದರೆ — ಪೂರ್ವಶಬ್ದದ ಕಡೇ ಅಕ್ಷರಕ್ಕೂ, ಪರಶಬ್ದದ ಆದಿ ಅಕ್ಷರಕ್ಕೂ ನಡುವೆ ಮತ್ತೊಂದು ಹೊಸ ಅಕ್ಷರ ಶೇರುವದೇ. ಉದಾ. [ಕೆಲಸ-ಇಲ್ಲ=] ಕೆಲಸವಿಲ್ಲ.

"ಆದೇಶ"ವೆಂದರೆ — ಮುಂಚೆ ಇದ್ದ ಅಕ್ಷರಗಳಲ್ಲಿ ಒಂದಕ್ಕೆ ಪ್ರತಿಯಾಗಿ ಬೇರೊಂದು ಹೊಸ ಅಕ್ಷರ ಬರುವದೇ. — ಉದಾ. [ಸೋತು-ಹೋಗಿ=] ಸೋತ್ಹೋಗಿ.

III. ಲೇಖನಾಂತರ ಚಿನ್ಹೆಗಳು.

18. ಪ್ರ. ಲೇಖನಾಂತರ ಚಿನ್ಹೆಗಳು ಯಾವವು?

ಉ. , ಅಲ್ಪವಿರಾಮ : — ಸೂಚಕ ಚಿನ್ಹೆ
; ಅರ್ಧವಿರಾಮ = ಸಮಾರ್ಥಕ ಚಿನ್ಹೆ
. ಪೂರ್ಣವಿರಾಮ " " ವಿಶೇಷಕ ಚಿನ್ಹೆ
? ಪ್ರಶ್ನಾ ಚಿನ್ಹೆ [ ] ( ) ಆವರಕ ಚಿನ್ಹೆ
! ಸಂಬೋಧಕ ಚಿನ್ಹೆ * † ಚಿತ್ರಿಕ ಹಂಸಪಾದ

ಶಬ್ದಖಂಡ.

I. ಶಬ್ದವ್ಯುತ್ಪತ್ತೀ ಪ್ರಕರಣ.

19. ಪ್ರ. "ಶಬ್ದ"ವೆಂದರೇನು?

ಉ. ಒಂದೇ ಅರ್ಥವನ್ನು ಹೇಳುವ ಅಕ್ಷರಗಳ ಗುಂಪು "ಶಬ್ದ"ವೆಂದು ವರ್ಣಿಸುವದು. ಅದರ ಮೂಲಾಕ್ಷರಗಳು ಮಾತ್ರ ಇದ್ದರೆ "ಪ್ರಕೃತಿ" ಎಂದೆನ್ನಿಸುವದು. ಪ್ರಕೃತಿಯ ತುದಿಯಲ್ಲಿ ಶೇರುವ ಬೇರೆ ಬೇರೆ ಅಕ್ಷರಗಳಿಗೆ "ಪ್ರತ್ಯಯ"ವೆಂಬ ಹೆಸರು. ಅಂಥಾ ಪ್ರತ್ಯಯಗಳನ್ನು ಹೊಂದುವ ಶಬ್ದವು "ಪದ"ವೆಂದು ವ್ಯವಹರಿಸುವದು.

20. ಪ್ರ. "ಸಮಾಸ" ಶಬ್ದಗಳು ಯಾವವು?

ಉ. ಎರಡು ಭಿನ್ನಪದಗಳು ಒಂದಕ್ಕೊಂದು ಶೇರಿಕೊಂಡು ಏಕ ಅರ್ಥವನ್ನು ಹೇಳುವಂಥ ಏಕ ಪದವಾದರೆ, "ಸಮಾಸಪದ"ವೆಂದು ವ್ಯವಹರಿಸುವದು. ಸಮಾಸವಾದ ಎರಡು ಪದಗಳಲ್ಲಿ ಹಿಂದಿನದು "ಪೂರ್ವಪದ"ವೆಂದು, ಮುಂದಿನದು "ಪರಪದ"ವೆಂದು ವರ್ಣಿಸುವದು. ಉದಾ. ಗುರುವಾಕ್ಯ, ಮೋಕ್ಷಮಾರ್ಗ, ಕೈಕೆಲಸ, ಬಾಯಿಮಾತು.

21. ಪ್ರ. ವಾಕ್ಯಾರ್ಥ ಭೇದದಿಂದ ಶಬ್ದಗಳು ಎಷ್ಟು ವಿಧವು?
ಉ. ಸಂಸ್ಕೃತ ವ್ಯಾಕರಣಕಾರರು ಶಬ್ದಗಳಲ್ಲಿ "ನಾಮಪದ, ಕ್ರಿಯಾಪದ, ಅವ್ಯಯಶಬ್ದ"ವೆಂಬ 3 ಮುಖ್ಯ ವಿಶೇಷಗಳನ್ನು ಮಾಡಿದ್ದಾರೆ. ಕಡಿಮೆ ಶಬ್ದವಿಧಗಳೆಲ್ಲಾ ಇವುಗಳು ಉಪವಿಶೇಷಗಳೆಂದು ತಿಳುಕೊಳ್ಳ ತಕ್ಕದ್ದು.

II. ನಾಮಪದದ ಪ್ರಕರಣ.

22. ಪ್ರ. "ನಾಮಪದ"ವೆಂದರೇನು?
ಉ. ವಸ್ತುಗಳ ಹೆಸರುಗಳನ್ನೂ ಅವುಗಳ ಗುಣ ಕ್ರಿಯಾದಿಗಳ ಹೆಸರುಗಳನ್ನೂ ಹೇಳುವ ಶಬ್ದಗಳೆಲ್ಲಾ ನಾಮಪದಗಳೇ. ಉದಾ. ದೇವದಾಸ, ತಂದೆ, ಮುದುಕ, ಮರಣ, ಸ್ವರ್ಗ, ಸುಖ. ಅಂಜಿಕೆ, ನಾಚಿಕೆ, ನಡತೆ, ಅಳತೆ.

23. ಪ್ರ. ನಾಮಪದಗಳಲ್ಲಿ ವಿಶೇಷಿಸ ತಕ್ಕ ಲಕ್ಷಣಗಳು ಯಾವವು?
ಉ. ಲಿಂಗ, ಸಂಖ್ಯೆ, ವಿಭಕ್ತಿ, ಎಂಬ 3 ವಿಧದ ಲಕ್ಷಣಗಳು.

24. ಪ್ರ. "ಲಿಂಗ" ಎಷ್ಟು ವಿಧವು.
ಉ. ಪುಲ್ಲಿಂಗ ಅಂದರೆ ಗಂಡು, ಸ್ತ್ರೀಲಿಂಗ ಅಂದರೆ ಹೆಣ್ಣು, ನಪುಂಸಕ ಲಿಂಗ ಅಂದರೆ ಗಂಡಲ್ಲಾ ಹೆಣ್ಣಲ್ಲಾ, ಈ ಮೂರು ವಿಧವು.

25. ಪ್ರ. ಕಂನಡದಲ್ಲಿ ನಾಮಪದಗಳ ಲಿಂಗಭೇದಗಳು ಹ್ಯಾಗೆ?
ಉ. ಜ್ಞಾನವುಳ್ಳ ವಸ್ತುಗಳಲ್ಲಿ ಪುರುಷರ ನಾಮಗಳಿಗೆ ಪುಲ್ಲಿಂಗವು, ಸ್ತ್ರೀಯರ ನಾಮಗಳಿಗೆ ಸ್ತ್ರೀಲಿಂಗವು, ಜ್ಞಾನವಿಲ್ಲದ ಕಡಿಮೆ ವಸ್ತುಗಳ ನಾಮಗಳಿಗೆಲ್ಲಾ ನಪುಂಸಕಲಿಂಗವು ಬರುವದು.

26. ಪ್ರ. ನಾಮಪದಗಳ "ಸಂಖ್ಯೆ" ಎಷ್ಟು ವಿಧವು?
ಉ. "ಏಕವಚನ" "ಬಹುವಚನ"ವೆಂಬ 2 ವಿಧವು: ಏಕವಚನವು ಏಕ ವಸ್ತುವನ್ನು ಹೇಳುವದು. ಬಹುವಚನವು ಬಹು ವಸ್ತುಗಳನ್ನು ಹೇಳುವದು. ಉದಾ. ಹುಡುಗ—ಹುಡುಗರು, ಮನೆ—ಮನೆಗಳು, ಕೂಸು—ಕೂಸುಗಳು, ಮರ—ಮರಗಳು.

27. ಪ್ರ. "ವಿಭಕ್ತಿ" ಎಂದರೇನು?
ಉ. ವಾಕ್ಯಗಳಲ್ಲಿ ನಾಮಪದಗಳಿಗೆ ಬರುವ ನಾನಾ ಕಾರಕಾರ್ಥಗಳನ್ನು ವಿಭಾಗಿಸಿ ತೋರಿಸುವದಕ್ಕೆ ಅವುಗಳಿಗೆ ಬೇರೆ ಬೇರೆ ಪ್ರತ್ಯಯಗಳು ಹತ್ತುವವು. ಇಂಥ ವಿಭಕ್ತಿ ಪ್ರತ್ಯಯವುಳ್ಳ ನಾಮಪದ ಸ್ವರೂಪವು ವಿಭಕ್ತಿರೂಪವೆಂದೆನ್ನಿಸುವದು.

28. ಅಂಥಾ ವಿಭಕ್ತಿಗಳು ಎಷ್ಟು?
ಉ. ಸಂಸ್ಕೃತದಲ್ಲಿ ಇರುವ ಸಪ್ತ ವಿಭಕ್ತಿಗಳನ್ನು ಕನ್ನಡದಲ್ಲಿ ಅನುಸರಿಸಿ ಏಳು ವಿಭಕ್ತಿಗಳನ್ನು ಹೇಳುತ್ತಾರೆ. "ಅವುಗಳ ಅಂಕಾಸಂಜ್ಞೆ" ಕಾರಕಾರ್ಥಸಂಜ್ಞೆ ಪ್ರತ್ಯಯಗಳು ಯಾವವೆಂದರೆ:

ಅಂಕಾಸಂಜ್ಞೆ.	ಕಾರಕಾರ್ಥಸಂಜ್ಞೆ.	ಪ್ರತ್ಯಯ.
ಪ್ರಥಮೆ	ಕರ್ತೃವಿಭಕ್ತಿ	ಉ
. . . .	ಸಂಬೋಧನ	ಎ (ಏ)
ದ್ವಿತೀಯೆ	ಕರ್ಮ ವಿಭಕ್ತಿ	ಅನ್ನು
ತೃತೀಯೆ	ಕರಣ ವಿಭಕ್ತಿ	ಇಂದ
ಚತುರ್ಥಿ	ಸಂಪ್ರದಾನ ವಿಭಕ್ತಿ	ಇಗೆ (ಗೆ, ಕ್ಕೆ.)
ಪಂಚಮಿ	ಅಪಾದಾನ ವಿಭಕ್ತಿ	ದೆಶೆಯಿಂದ
ಷಷ್ಠಿ	ಸಂಬಂಧ ವಿಭಕ್ತಿ	ಅ
ಸಪ್ತಮಿ	ಅಧಿಕರಣ ವಿಭಕ್ತಿ	ಅಲ್ಲಿ

ನಾಮ ಪದಗಳ

	ವಿಭಕ್ತಿಗಳ ಸಂಜ್ಞೆಗಳು.	ವಿಭಕ್ತಿ ಪ್ರತ್ಯಯಗಳು.	ಅಕಾರಾಂ ಪುಲ್ಲಿಂಗ. ಸೇವಕ.	ಸ್ತ್ರೀಲಿಂಗ.
ಏಕವಚನ.	ಪ್ರ. ಕರ್ತೃ ವಿಭಕ್ತಿ	ಉ	ಸೇವಕನು	ಸೇವಕಳು
	ಸಂಬೋಧನ	ಎ (ಏ)	ಸೇವಕನೇ	ಸೇವಕಳೇ
	ದ್ವಿ. ಕರ್ಮ ವಿಭಕ್ತಿ	ಅನ್ನು	ಸೇವಕನನ್ನು	ಸೇವಕಳನ್ನು
	ತ್ರಿ. ಕರಣ ವಿಭಕ್ತಿ	ಇಂದ	ಸೇವಕನಿಂದ	ಸೇವಕಳಿಂದ
	ಚ. ಸಂಪ್ರದಾನವಿಭಕ್ತಿ	ಇಗೆ (ಗೆ) ಕ್ಕೆ	ಸೇವಕನಿಗೆ	ಸೇವಕಳಿಗೆ
	ಪ. ಅಪಾದಾನವಿಭಕ್ತಿ	ದೆಶೆಯಿಂದ	ಸೇವಕನ ದೆಶೆಯಿಂದ	ಸೇವಕಳ ದೆಶೆಯಿಂದ
	ಷ. ಸಂಬಂಧ ವಿಭಕ್ತಿ	ಅ	ಸೇವಕನ	ಸೇವಕಳ
	ಸ. ಅಧಿಕರಣ ವಿಭಕ್ತಿ	ಅಲ್ಲಿ	ಸೇವಕನಲ್ಲಿ	ಸೇವಕಳಲ್ಲಿ
ಬಹುವಚನ.	ಪ್ರ. ಕರ್ತೃ ವಿಭಕ್ತಿ	ಉ	ಸೇವಕರು	
	ಸಂಬೋಧನ	ಎ (ಏ)	ಸೇವಕರೇ	
	ದ್ವಿ. ಕರ್ಮ ವಿಭಕ್ತಿ	ಅನ್ನು	ಸೇವಕರನ್ನು	
	ತ್ರಿ. ಕರಣ ವಿಭಕ್ತಿ	ಇಂದ	ಸೇವಕರಿಂದ	
	ಚ. ಸಂಪ್ರದಾನವಿಭಕ್ತಿ	ಇಗೆ	ಸೇವಕರಿಗೆ	
	ಪ. ಅಪಾದಾನವಿಭಕ್ತಿ	ದೆಶೆಯಿಂದ	ಸೇವಕರ ದೆಶೆಯಿಂದ	
	ಷ. ಸಂಬಂಧ ವಿಭಕ್ತಿ	ಅ	ಸೇವಕರ	
	ಸ. ಅಧಿಕರಣ ವಿಭಕ್ತಿ	ಅಲ್ಲಿ	ಸೇವಕರಲ್ಲಿ	

ವಿಭಕ್ತಿ ರೂಪಮಾಲೆ.

ತಗಳು.	ಇ, ಎ, ಐ, ಕಾರಾಂತಗಳು.	ಉಕಾರಾಂತಗಳು.	
ನಪುಂಸಕಲಿಂಗ.	ಪುಂ. ಸ್ತ್ರಿ. ನಪು. ಲಿಂಗ.	ನಿತ್ಯ ಉಕಾರಾಂತ.	ಅನಿತ್ಯ ಉಕಾರಾಂತ
ಮರ.	ಕುರಿ.	ಗುರು.	ಊರು.
ಮರವು	ಕುರಿಯು	ಗುರುವು	ಊರು
ಮರವೇ	ಕುರಿಯೇ	ಗುರುವೇ	ಊರೇ
ಮರವನ್ನು	ಕುರಿಯನ್ನು	ಗುರುವನ್ನು	ಊರನ್ನು
ಮರದಿಂದ	ಕುರಿಯಿಂದ	ಗುರುವಿನಿಂದ	ಊರಿನಿಂದ, ಊರಿಂದ
ಮರಕ್ಕೆ	ಕುರಿಗೆ	ಗುರುವಿಗೆ	ಊರಿಗೆ
ಮರದ ದೆಶೆಯಿಂದ	ಕುರಿಯ ದೆಶೆಯಿಂದ	ಗುರುವಿನ ದೆಶೆಯಿಂದ	ಊರಿನ ದೆಶೆಯಿಂದ
ಮರದ	ಕುರಿಯ	ಗುರುವಿನ	ಊರಿನ, ಊರ
ಮರದಲ್ಲಿ	ಕುರಿಯಲ್ಲಿ	ಗುರುವಿನಲ್ಲಿ	ಊರಿನಲ್ಲಿ, ಊರಲ್ಲಿ
ಮರಗಳು	ಕುರಿಗಳು	ಗುರುಗಳು	ಊರುಗಳು
ಮರಗಳೇ	ಕುರಿಗಳೇ	ಗುರುಗಳೇ	ಊರುಗಳೇ
ಮರಗಳನ್ನು	ಕುರಿಗಳನ್ನು	ಗುರುಗಳನ್ನು	ಊರುಗಳನ್ನು
ಮರಗಳಿಂದ	ಕುರಿಗಳಿಂದ	ಗುರುಗಳಿಂದ	ಊರುಗಳಿಂದ
ಮರಗಳಿಗೆ	ಕುರಿಗಳಿಗೆ	ಗುರುಗಳಿಗೆ	ಊರುಗಳಿಗೆ
ಮರಗಳ ದೆಶೆಯಿಂದ	ಕುರಿಗಳ ದೆಶೆಯಿಂದ	ಗುರುಗಳ ದೆಶೆಯಿಂದ	ಊರುಗಳ ದೆಶೆಯಿಂದ
ಮರಗಳ	ಕುರಿಗಳ	ಗುರುಗಳ	ಊರುಗಳ
ಮರಗಳಲ್ಲಿ	ಕುರಿಗಳಲ್ಲಿ	ಗುರುಗಳಲ್ಲಿ	ಊರುಗಳಲ್ಲಿ

III. ಸರ್ವನಾಮಪ್ರಕರಣ.

29. ಪ್ರ. "ಸರ್ವನಾಮ"ವೆಂದರೇನು?

ಉ. ವಾಕ್ಯಗಳಲ್ಲಿ ನಾಮಪದಗಳಿಗೆ ಪ್ರತಿಯಾಗಿ ಪ್ರಯೋಗಿಸುವ ಶಬ್ದಗಳು "ಸರ್ವನಾಮ"ಗಳೆಂದೆನ್ನಿಸುವವು.

30. ಪ್ರ. ಅವು ಎಷ್ಟು ವಿಧವು?

ಉ. ಪುರುಷಾರ್ಥಕ, ಆತ್ಮಾರ್ಥಕ, ಪ್ರಶ್ನಾರ್ಥಕ, ದರ್ಶಕವೆಂಬ 4 ವಿಧವು.

31. ಪ್ರ. "ಪುರುಷಾರ್ಥಕ ಸರ್ವನಾಮ"ಗಳು ಯಾವವು?

ಉ.

		ಏಕವಚನ.	ಬಹುವಚನ.
ಉತ್ತಮ ಪುರುಷ	—	ನಾನು	ನಾವು
ಮಧ್ಯಮ ಪುರುಷ	—	ನೀನು	ನೀವು
ಪ್ರಥಮ ಪುರುಷ ಪುಂ.	—	ಅವನು	ಅವರು
ಸ್ತ್ರೀ.	—	ಅವಳು	
ನಪುಂ.	—	ಅದು	ಅವು = ಅವುಗಳು

32. ಪ್ರ. "ಆತ್ಮಾರ್ಥಕ ಸರ್ವನಾಮ" ಯಾವದು?

ಉ. ಏಕವಚನ "ತಾನು", ಬಹುವಚನ "ತಾವು".

33. ಪ್ರ. "ಪ್ರಶ್ನಾರ್ಥಕ ಸರ್ವನಾಮ"ಗಳು ಯಾವವು?

ಉ. ಅವು 2 ವಿಧವಾಗಿವೆ, ಹ್ಯಾಗಂದರೆ —

1.) ವಸ್ತುಗಳ ವ್ಯಕ್ತಿಯನ್ನು ಕೇಳುವಂಥಾವು ಯಾವವೆಂದರೆ:

		ಪುಂ.	ಸ್ತ್ರೀ.	ನಪುಂ.
ಏಕವಚನ	— ಯಾವ	ಯಾವನು	ಯಾವಳು	ಯಾವದು
ಬಹುವಚನ	— ಯಾವ	ಯಾವರು		ಯಾವವು
ಒಟ್ಟಿಗೆ	—	ಯಾರು		ಏನು

2. ವಸ್ತುಗಳ ಗುಣ ಕೇಳುವಂಥಾವು ಯಾವವಂದರೆ —

ಏಕವಚನ	— ಎಂಥ	ಎಂಥವನು	ಎಂಥವಳು	ಎಂಥಾದು
ಬಹುವಚನ	— ಎಂಥ	ಎಂಥವರು		ಎಂಥಾವು

34. ಪ್ರ. ದರ್ಶಕ ಸರ್ವನಾಮಗಳು ಯಾವವು?

ಉ. ದರ್ಶಕ ಸರ್ವನಾಮಗಳು ಪ್ರಶ್ನಾರ್ಥಕ ಸರ್ವನಾಮಗಳಿಗೆ ಪ್ರತ್ಯುತ್ತರವಾಗಿ 2 ವಿಧವು.

1. ವಸ್ತುಗಳ ವ್ಯಕ್ತಿ ಸೂಚಿಸುವಂಥಾವು ಯಾವವಂದರೆ:

ಸಮೀಪದಲ್ಲಿ — ಈ — ಇವನು [=ಈತನು] ಇವಳು [=ಈಕೆ] ಇದು, ಇವರು, ಇವು.

ದೂರದಲ್ಲಿ — ಆ — ಅವನು [=ಆತನು] ಅವಳು [=ಆಕೆ] ಅದು, ಅವರು, ಅವು.

2. ವಸ್ತುಗಳ ಗುಣ ಸೂಚಿಸುವಂಥಾವು ಯಾವವಂದರೆ:

ಸಮೀಪದಲ್ಲಿ — ಇಂಥ — ಇಂಥವನು, ಇಂಥವಳು, ಇಂಥಾದು; ಇಂಥವರು, ಇಂಥಾವು.

ದೂರದಲ್ಲಿ — ಅಂಥ — ಅಂಥವನು, ಅಂಥವಳು, ಅಂಥಾದು; ಅಂಥವರು, ಅಂಥಾವು.

35. ಪ್ರ. ಸರ್ವನಾಮಗಳ ವಿಭಕ್ತಿರೂಪಗಳು ಹ್ಯಾಗೆ?

ಉ. ಸರ್ವನಾಮಗಳ ವಿಭಕ್ತಿ ರೂಪಮಾಲೆ.

ಪ್ರ.	ನಾನು	ನಾವು	ಅವನು	ಅವಳು	ಅವರು
ದ್ವಿ.	ನನ್ನನ್ನು	ನಮ್ಮನ್ನು	ಅವನನ್ನು	ಅವಳನ್ನು	ಅವರನ್ನು
ತ್ರಿ.	ನನ್ನಿಂದ	ನಮ್ಮಿಂದ	ಅವನಿಂದ	ಅವಳಿಂದ	ಅವರಿಂದ
ಚ.	ನನಗೆ	ನಮಗೆ	ಅವನಿಗೆ	ಅವಳಿಗೆ	ಅವರಿಗೆ
ಷ.	ನನ್ನ	ನಮ್ಮ	ಅವನ	ಅವಳ	ಅವರ
ಸ.	ನನ್ನಲ್ಲಿ	ನಮ್ಮಲ್ಲಿ	ಅವನಲ್ಲಿ	ಅವಳಲ್ಲಿ	ಅವರಲ್ಲಿ
	ನೀನು	ನೀವು	ಇವನು	ಇವಳು	ಇವರು
	ತಾನು	ತಾವು	ಯಾವನು	ಯಾವಳು	ಯಾವರು
ಪ್ರ.	ಅದು	ಅವು(ಗಳು)	ಯಾರು	ಏನು	
ದ್ವಿ.	ಅದನ್ನು	ಅವುಗಳನ್ನು	ಯಾರನ್ನು	ಏನು	
ತ್ರಿ.	ಅದರಿಂದ	ಅವುಗಳಿಂದ	ಯಾರಿಂದ	ಯಾತರಿಂದ	
ಚ.	ಅದಕ್ಕೆ	ಅವುಗಳಿಗೆ	ಯಾರಿಗೆ	ಯಾತಕ್ಕೆ	
ಷ.	ಅದರ	ಅವುಗಳ	ಯಾರ	ಯಾತರ	
ಸ.	ಅದರಲ್ಲಿ	ಅವುಗಳಲ್ಲಿ	ಯಾರಲ್ಲಿ	ಯಾತರಲ್ಲಿ	
	ಇದು	ಇವು(ಗಳು)			
	ಯಾವದು	ಯಾವವು(ಗಳು)			

IV. ಗುಣವಾಚಕ ಸಂಖ್ಯಾವಾಚಕ ಪ್ರಕರಣ.

36. ಪ್ರ. ಗುಣವಾಚಕ ಪದಗಳು ಯಾವವು?

ಉ. ವಸ್ತುಗಳ ಗುಣಗಳನ್ನು ವಿಶೇಷಿಸುವ ಪದಗಳೇ ಗುಣವಾಚಿಗಳೆಂದೆನ್ನಿಸಿ ಕೊಂಬವು.

ಉದಾ. ಶುದ್ಧ, ಪೂರ್ಣ, ದೊಡ್ಡ, ಸಣ್ಣ, ಒಳ್ಳೆ.

37. ಪ್ರ. ಸಂಖ್ಯಾಪದಗಳು ಯಾವವು?

ಉ. ಒಂದು, ಎರಡು, ಮೂರು — ಮುಂತಾದ ಅಂಕೆಗಳ ಹೆಸರುಗಳು "ಸಂಖ್ಯಾವಾಚಕ"ಗಳೆಂದು ವರ್ಣಿಸುವವು. ಅವುಗಳಿಗೆ "ನೆ" ಎಂಬ ಪ್ರತ್ಯಯ ಹತ್ತಿಸುವದರಿಂದ ಒಂದನೆ, ಎರಡನೆ, ಮೂರನೆ — ಮುಂತಾದ "ಸಂಖ್ಯಾಪೂರಣ"ಗಳು ಆಗುವವು. ಸ್ವಲ್ಪ, ಬಹಳ, ಕೆಲವು, ಹಲವು, ಅನೇಕ, ಎಲ್ಲ, ಸಕಲ, ಸಮಸ್ತ — ಮುಂತಾದ ಪದಗಳು ವಸ್ತುಗಳ ಸಂಖ್ಯೆ ವಿಶೇಷಿಸದೆ ಅವುಗಳ ಪರಿಮಾಣವನ್ನು ಒಟ್ಟಿಗೆ ಹೇಳುವ ಕಾರಣ ಆ ಪದಗಳು "ಅವಿಶೇಷ ಸಂಖ್ಯೆ"ಗಳೆಂದು, "ಪರಿಮಾಣವಾಚಕ"ಗಳೆಂದು ವರ್ಣಿಸುವವು.

38. ಪ್ರ. ಗುಣವಾಚಕ ಸಂಖ್ಯಾವಾಚಕಗಳಿಗೆ ಲಿಂಗವಚನಸೂಚಕಗಳು ಬರುತ್ತವೋ?

ಉ. ನಾಮಪದಗಳ ಪೂರ್ವದಲ್ಲಿ ಅವುಗಳಿಗೆ ಲಿಂಗವಚನ ಸೂಚಕಗಳು ಇಲ್ಲ, ಬರೀ ಪ್ರಕೃತಿರೂಪ ಬರುವದು. ಪರಂತು ಅವು ನಾಮಪದಗಳಿಗೆ ಪರವಾದರೆ "ವಿಧೇಯವಿಶೇಷಣ"ಗಳೆಂದೆನಿಸುವವು, ಈ ಪಕ್ಷದಲ್ಲಿ ಅವುಗಳಿಗೆ ಲಿಂಗವಚನ ಸೂಚಕಗಳು ಬರುವವು. ಯಾವವಂದರೆ:

"ನು" "ಳು" "ರು" "ದು" "ವು" ಎಂಬ ಅಚ್ಪ್ರತ್ಯಯಗಳು. ಅಥವಾ — "ಅವನು, ಅವಳು, ಅವರು, ಅದು, ಅವು" ಎಂಬ ಸರ್ವನಾಮಗಳು.

ಉದಾ.	ಸಣ್ಣನು, ಸಣ್ಣಳು, ಸಣ್ಣರು, ಸಣ್ಣದು, ಸಣ್ಣವು.
ಸಣ್ಣ	ಸಣ್ಣವನು, ಸಣ್ಣವಳು, ಸಣ್ಣವರು, ಸಣ್ಣದು, ಸಣ್ಣವುಗಳು.
ನಾಲ್ಕನೆ	ನಾಲ್ಕನೆಯವನು, ನಾಲ್ಕನೆಯವಳು, ನಾಲ್ಕನೇದು.
	ನಾಲ್ಕನೆಯವರು, ನಾಲ್ಕನೆಯವುಗಳು.

V. ಕ್ರಿಯಾಪದ ಪ್ರಕರಣ.

39. ಪ್ರ. "ಕ್ರಿಯಾಪದ"ವೆಂದರೇನು?

ಉ. ಮಾಡೋಣ, ಪಡೋಣ, ಇರೋಣ, ಮೊದಲಾದ ಕ್ರಿಯೆಗಳನ್ನು ಹೇಳುವ ಪದಗಳಿಗೆ "ಕ್ರಿಯಾಪದ"ವೆಂಬ ಹೆಸರು. ಅಂಥಾ ಕ್ರಿಯಾಪದಗಳ ಮೂಲಸ್ವರೂಪಗಳಿಗೆ "ಧಾತು"ವೆಂಬ ಹೆಸರು.

40. ಪ್ರ. ಕ್ರಿಯಾಪದಗಳಲ್ಲಿ ವಿಶೇಷಿಸ ತಕ್ಕ ಲಕ್ಷಣಗಳು ಯಾವವು?

ಉ. ಧಾತ್ವರ್ಥತ್ರಯ, ರೂಪತ್ರಯ, ಕಾಲತ್ರಯ, ಪುರುಷತ್ರಯ, ಲಿಂಗತ್ರಯ, ವಚನದ್ವಯ, ಅರ್ಥವಿಶೇಷತ್ರಯ, ಈ ಪ್ರಕಾರ 20 ಲಕ್ಷಣಗಳನ್ನು ವಿಶೇಷಿಸ ತಕ್ಕದ್ದು.

41. ಪ್ರ. ಧಾತ್ವರ್ಥತ್ರಯವು ಯಾವವು?

ಉ. "ಸಕರ್ಮಕ, ಅಕರ್ಮಕ, ಪ್ರಯೋಜಕ",ವೆಂಬ 3 ವಿಧದ ಅರ್ಥಗಳು ಧಾತುಗಳಿಗೆ ಉಂಟು. ಹ್ಯಾಗಂದರೆ —

1. ಕರ್ಮ ಸಹಿತವಾದ ಧಾತುಗಳು "ಸಕರ್ಮಕ"ವೆಂದೆನ್ನಿಸುವವು. ಕರ್ಮವೆಂದರೆ ಕ್ರಿಯೆಗೆ ವಿಷಯವಾದ ವಸ್ತು. "ಯಾರನ್ನು" "ಏನು" ಎಂಬ ಪ್ರಶ್ನೆಗಳು ಅದನ್ನು ಕೇಳುವವು. ಉದಾ. ಹುಡುಗನನ್ನು ಕರೆ, ಅಕ್ಷರಗಳನ್ನು ಬರೆ.

2. ವಿಷಯವಿಲ್ಲದ ಕ್ರಿಯೆಗಳು "ಅಕರ್ಮಕ"ವೆಂದೆನ್ನಿಸುವವು, ಅವುಗಳ ಮುಂದೆ "ಯಾರನ್ನು" "ಏನು" ಎಂಬ ಪ್ರಶ್ನೆಗಳಿಗೆ ಉತ್ತರ ಬರುವದಿಲ್ಲ.

ಉದಾ. ಹೋಗು, ಆಗು, ಇರು, ಇಳಿ.

3. ಮತ್ತೊಬ್ಬನ ಮುಖದಿಂದ ನಡಿಸಿದ ಕ್ರಿಯೆಗಳು "ಪ್ರಯೋಜಕ"ವೆಂದೆನ್ನಿಸುವವು. ಸಕರ್ಮಕ ಧಾತುಗಳ ಮೇಲೆ "ಇಸು"

ಎಂಬ ಪ್ರತ್ಯಯ ಹತ್ತಿಸುವದರಿಂದ ಪ್ರಯೋಜಕ ಧಾತುಗಳು ಆಗುವವು. ಉದಾ. [ಮಾಡು] ಮಾಡಿಸು [ನುಡಿ] ನುಡಿಸು.

42. ಪ್ರ. ರೂಪತ್ರಯವು ಯಾವವು?

ಉ. ಧಾತುಗಳ ಮೇಲೆ ಬೇರೆ ಬೇರೆ ಪ್ರತ್ಯಯಗಳನ್ನು ಹತ್ತಿಸುವದರಿಂದ ಕ್ರಿಯಾಪದರೂಪಗಳು ಆಗುವವು. ಆದರೆ ಆ ಪ್ರತ್ಯಯಗಳೊಳಗೆ "ಅವ್ಯಯಪ್ರತ್ಯಯ, ನಾಮಪ್ರತ್ಯಯ, ಪುರುಷಪ್ರತ್ಯಯ"ವೆಂಬ 3 ವಿಧವು ಇರಲಾಗಿ, ಇವುಗಳು ಅನುಬಂಧನೆಯಿಂದ ಉಂಟಾಗುವ ಕ್ರಿಯಾಪದರೂಪಗಳೊಳಗೂ "ಅವ್ಯಯಾತ್ಮಕ, ನಾಮಾತ್ಮಕ, ಪುರುಷಾತ್ಮಕ"ವೆಂಬ 3 ವಿಧವು ಉಂಟು.

43. ಪ್ರ. ಅವ್ಯಯಾತ್ಮಕ ರೂಪಗಳು ಯಾವವು?

ಉ. "ಭಾವರೂಪ, ನ್ಯೂನರೂಪ"ವೆಂಬಿವು. ಭಾವರೂಪಗಳು ಕ್ರಿಯೆಯನ್ನು ಭಾವಾರ್ಥವಾಗಿ ಹೇಳುತ್ತವೆ. ನ್ಯೂನರೂಪಗಳು ಹೇಳುವ ಕ್ರಿಯೆಯು ಸಂಪೂರ್ಣವಲ್ಲ, ಅಸಮಾಪ್ತವಾಗಿದೆ. ಅದು ಸಮಾಪ್ತವಾಗುವದಕ್ಕೆ ವಾಕ್ಯವನ್ನು ಮುಗಿಸುವ ಇನ್ನೊಂದು ಕ್ರಿಯಾಪದವು ಅಗತ್ಯ. ಅದು ಕಾರಣ ಕೆಲವರು ಅದಕ್ಕೆ "ಕ್ರಿಯಾನ್ಯೂನ" ಅನ್ನುವರು.

44. ಪ್ರ. ನಾಮಾತ್ಮಕ ರೂಪಗಳು ಯಾವವು?

ಉ. "ಕೃದ್ವಾಚಿ, ಕೃದ್ವಾಚಕನಾಮ, ಕ್ರಿಯಾನಾಮ"ವೆಂಬಿವು. ಕೃದ್ವಾಚಿಗಳು ವಿಶೇಷಣ ಪದಗಳಾಗಿ ಪ್ರಯೋಗಿಸುತ್ತವೆ. ಅವುಗಳಿಗೆ "ಅವನು" ಇತ್ಯಾದಿ ಸರ್ವನಾಮಗಳನ್ನು ಸಮಾಸ ಮಾಡುವದರಿಂದ ಕೃದ್ವಾಚಕನಾಮಗಳು ಆಗುತ್ತವೆ. ಕ್ರಿಯಾನಾಮಗಳು ಧಾತುಗಳ ಭಾವಾರ್ಥವನ್ನು ನಾಮವಾಚಕಗಳಾಗಿ ಹೇಳು

ತ್ತವೆ. ವಿಶೇಷಣಗಳಾಗಿ ಪ್ರಯೋಗಿಸುವ ಕೃದ್ವಾಚಿಗಳ ಉತ್ತರದಲ್ಲಿ ಯಾವಾಗಲು ವಿಶೇಷ್ಯಶಬ್ದವು ಬರುವದರಿಂದ, ಕೆಲವರು ಕೃದ್ವಾಚಿಗೆ "ಶಬ್ದನ್ಯೂನ" ಅನ್ನುವರು.

45. ಪ್ರ. ಪುರುಷಾತ್ಮಕ ರೂಪಗಳು ಯಾವವು?

ಉ. ಉತ್ತಮ, ಮಧ್ಯಮ, ಪ್ರಥಮ ಪುರುಷವೆಂಬ 3 ವಿಧದ ಪುರುಷಪ್ರತ್ಯಯಗಳನ್ನು ಹೊಂದಿದ ಕ್ರಿಯಾಪದಗಳೇ.

46. ಪ್ರ. ಕಾಲತ್ರಯವು ಯಾವವು?

ಉ. "ವರ್ತಮಾನಕಾಲ, ಭೂತಕಾಲ, ಭವಿಷ್ಯತ್ಕಾಲ"ವೆಂಬಿವು. "ವರ್ತಮಾನಕಾಲ"ವೆಂದರೆ ನಡೆಯುವ ಕಾಲವು, "ಭೂತಕಾಲ"ವೆಂದರೆ ಹೋದ ಕಾಲವು, "ಭವಿಷ್ಯತ್ಕಾಲ"ವೆಂದರೆ ಬರುವ ಕಾಲವು.

47. ಪ್ರ. ಅರ್ಥವಿಶೇಷತ್ರಯವು ಯಾವವು?

ಉ. "ಸಂಭವ, ಅಭಾವ, ವಿಧಿ" ಎಂಬಿವು. ಸಂಭವಾರ್ಥಕ ಕ್ರಿಯಾಪದಗಳು ಆಗಲೇ ಸಂಭವಿಸಿದಂಥಾ, ಅಥವಾ ಈಗಲೇ ಸಂಭವಿಸುವಂಥಾ, ಅಥವಾ ಇನ್ನು ಮುಂದೆ ಸಂಭವಿಸಲಿಕ್ಕಿರುವಂಥಾ ಕ್ರಿಯೆಯನ್ನು ಹೇಳುತ್ತವೆ. ಅವುಗಳಿಗೆ "ವರ್ತಮಾನ, ಭೂತ, ಭವಿಷತ್ತು, ಭಾವಿ" ಎಂಬ 4 ಕಾಲವಿಶೇಷಗಳುಂಟು. ಅಭಾವಾರ್ಥಕ ಕ್ರಿಯಾಪದಗಳಿಗೆ ಸಾಧಾರಣವಾಗಿ "ನಿಷೇಧ"ವೆಂಬ ಹೆಸರು ಪ್ರಯೋಗಿಸುವದು. ಅವು ತ್ರಿಕಾಲದಲ್ಲಿ ಕ್ರಿಯೆಯು ನಡಿಯದೆಂದು ಹೇಳುತ್ತವೆ. ವಿಧ್ಯರ್ಥಕ ಕ್ರಿಯಾಪದಗಳು ಸಂಭವಿಸ ತಕ್ಕಂಥಾ ಒಂದು ಕ್ರಿಯೆಯನ್ನು ಆಜ್ಞಾಪನೆ, ವಿಜ್ಞಾಪನೆ, ಅನುಮತಿ ಮುಂತಾದ ಅರ್ಥಗಳಿಂದ ಹೇಳುತ್ತವೆ.

48. ಪ್ರ. ಈ ವಿವಿಧ ಲಕ್ಷಣಗಳನ್ನೆಲ್ಲಾ ಕ್ರಿಯಾಪದಗಳ ರೂಪದಲ್ಲಿ ತೋರಿಸುವದಕ್ಕೆ ಸಾಧನವೇನು?

ಉ. ಇದಕ್ಕೆ ಅವುಗಳ ಕೊನೆಯಲ್ಲಿ ಬೇರೆ ಬೇರೆ ಪ್ರತ್ಯಯಗಳು ಹತ್ತುವವು. ಹ್ಯಾಗಂದರೆ ಧಾತುವಿನ ಮೇಲೆ ಭಾವರೂಪ, ನ್ಯೂನರೂಪ, ಕೃದ್ವಾಚಿಗಳ ಪ್ರತ್ಯಯಗಳು ಹತ್ತುತ್ತವೆ. ವಿಕರಣಗಳೆಂದೆನ್ನಿಸಿ ಕೊಂಬ ಇವುಗಳ ಮೇಲೆ ಆಗಲಿ ಅಥವಾ ಧಾತುವಿನ ಮೇಲೆ ಆಗಲಿ ಪುರುಷಪ್ರತ್ಯಯಗಳು ಹತ್ತುತ್ತವೆ.

49. ಪ್ರ. ಧಾತುವಿನ ಮೇಲೆ ಹತ್ತುವ ವಿಕರಣಗಳು ಯಾವವು?

ಉ.

ಭಾವರೂಪ ಪ್ರತ್ಯಯಗಳು.	1. ಅ 2. ಅಲಿ 3. ಅಲಿಕ್ಕೆ.			
	ವರ್ತಮಾನ	ಭೂತ	ಭವಿಷ್ಯತ್	ನಿಷೇಧ
ನ್ಯೂನ ಪ್ರತ್ಯಯಗಳು	ಉತ್ತಾ	ಇ (ದು) ದು	. . . .	ಅದೆ
ಕೃದ್ವಾಚಿ ಪ್ರತ್ಯಯಗಳು.	(ಉವ)	ಇದ, ದ	ಉವ	ಅದ

ಕೃದ್ವಾಚಿಗಳಿಗೆ "ಅವನು, ಅವಳು, ಅದು, ಅವರು, ಅವುಗಳು" ಎಂಬ ಸರ್ವನಾಮಗಳನ್ನು ಸಮಾಸ ಮಾಡುವದರಿಂದ ಕೃದ್ವಾಚಕನಾಮಗಳು ಆಗುವವು. ಮತ್ತು ಕೃದ್ವಾಚಿಗಳಿಗೆ "ದು" ಪ್ರತ್ಯಯವನ್ನು ಅನುಬಂಧಿಸುವದರಿಂದ ಕ್ರಿಯಾನಾಮಗಳು ಆಗುವವು.

50. ಪ್ರ. ಪುರುಷಪ್ರತ್ಯಯಗಳು ಯಾವವು?

ಉ.

	ಪುರುಷ.	ಲಿಂಗ	ವರ್ತಮಾನ	ಭವಿಷ್ಯತ್ತು	ಭೂತ	ಭಾವಿ	ನಿಷೇಧ	ವಿಧಿ.
ಏಕವಚನ.	ಉತ್ತಮ ಪು.		ಏನೆ	ಏನು	ಎನು	ಎನು	ಎನು	ಉವೆ [ಅಲಿ]
	ಮಧ್ಯಮ ಪು.		ಈ	ಈಯೆ	ಇ [ಎ]	ಇ	ಎ	ಧಾತು
	ಪ್ರಥಮ ಪು.	ಪುಂ.	ಆನೆ	ಆನು	ಅನು	ಅನು	ಅನು	
		ಸ್ತ್ರೀ.	ಆಳೆ	ಆಳು	ಅಳು	ಅಳು	ಅಳು	ಅಲಿ
		ನಪುಂ.	ಅದೆ	ಈತು	ಇತು	ಅದು	ಅದು	
ಬಹುವಚನ.	ಉತ್ತಮ ಪು.		ಏವೆ	ಏವು	ಎವು	ಎವು	ಎವು	ಉವಾ [ಓಣ]
	ಮಧ್ಯಮ ಪು.		ಈರಿ	ಈರಿ	ಇರಿ	ಇರಿ	ಅರಿ	ಇರಿ
	ಪ್ರಥಮ ಪು.	ಪು. ಸ್ತ್ರೀ	ಆರೆ	ಆರು	ಅರು	ಅರು	ಅರು	ಅಲಿ
		ನಪುಂ.	ಅವೆ	ಆವು	ಅವು	ಅವು	ಅವು	

ಕ್ರಿಯಾ ಮಾಲೆ.

"ಉ"ಕಾರಾಂತ ಧಾತುಗಳ ಉದಾಹರಣೆ.—"ಮಾಡು".

I. ಅಪೂರ್ಣ ಕ್ರಿಯಾಪದ.

1. ಅವ್ಯಯಾತ್ಮಕ ರೂಪಗಳು. ಭಾವರೂಪ 1. ಮಾಡಿ 2. ಮಾಡಲು 3. ಮಾಡಲಿಕ್ಕೆ

2. ನಾಮಾತ್ಮಕ ರೂಪಗಳು

	ವರ್ತಮಾನ	ಭೂತ	ಭವಿಷ್ಯತ್ತು	ನಿಷೇಧ
ನ್ಯೂನರೂಪ	ಮಾಡುತ್ತ	ಮಾಡಿ	....	ಮಾಡದೆ
ಕೃದ್ವಾಚಿ	....	ಮಾಡಿದ	ಮಾಡುವ	ಮಾಡದ
ಕೃದ್ವಾಚಕನಾಮ	....	ಮಾಡಿದವನು ಇತ್ಯಾದಿ	ಮಾಡುವವನು ಇತ್ಯಾದಿ	ಮಾಡದವನು ಇತ್ಯಾದಿ
ಕ್ರಿಯಾನಾಮ	....	ಮಾಡಿದ್ದು	ಮಾಡುವದು / ಮಾಡೋಣ	ಮಾಡದ್ದು

II. ಪೂರ್ಣ ಕ್ರಿಯಾಪದ.

(ಪುರುಷಾತ್ಮಕ ರೂಪಗಳು)

	ಸರ್ವನಾಮ		ವರ್ತಮಾನ	ಭೂತ	ಭವಿಷ್ಯತ್ತು	ಭಾವಿ	ನಿಷೇಧ	ವಿಧಿ
ಏಕವಚನ	ಉ.........	ನಾನು	ಮಾಡುತ್ತೇನೆ	ಮಾಡಿದೆನು	ಮಾಡೇನು	ಮಾಡುವೆನು	ಮಾಡೆನು	ಮಾಡುವೆ
	ಮ.........	ನೀನು	ಮಾಡುತ್ತೀ	ಮಾಡಿದಿ	ಮಾಡೀ	ಮಾಡುವಿ	ಮಾಡೆ	ಮಾಡು
	ಪ್ರ. ಪು...	ಅವನು	ಮಾಡುತ್ತಾನೆ	ಮಾಡಿದನು	ಮಾಡ್ಯಾನು	ಮಾಡುವನು	ಮಾಡನು	ಮಾಡಲಿ
	ಸ್ತ್ರೀ....	ಅವಳು	ಮಾಡುತ್ತಾಳೆ	ಮಾಡಿದಳು	ಮಾಡ್ಯಾಳು	ಮಾಡುವಳು	ಮಾಡಳು	
	ನಪುಂ.	ಅದು	ಮಾಡುತ್ತದೆ	ಮಾಡಿತು	ಮಾಡೀತು	ಮಾಡುವದು	ಮಾಡದು	
ಬಹುವಚನ	ಉ.........	ನಾವು	ಮಾಡುತ್ತೇವೆ	ಮಾಡಿದೆವು	ಮಾಡೇವು	ಮಾಡುವೆವು	ಮಾಡೆವು	ಮಾಡುವಾ ಮಾ [ಡೋಣ
	ಮ.........	ನೀವು	ಮಾಡುತ್ತೀರಿ	ಮಾಡಿದಿರಿ	ಮಾಡೀರಿ	ಮಾಡುವಿರಿ	ಮಾಡರಿ	ಮಾಡಿರಿ
	ಪ್ರ. ಪು. ಸ್ತ್ರೀ	ಅವರು	ಮಾಡುತ್ತಾರೆ	ಮಾಡಿದರು	ಮಾಡ್ಯಾರು	ಮಾಡುವರು	ಮಾಡರು	ಮಾಡಲಿ
	ನಪುಂ.	ಅವು	ಮಾಡುತ್ತವೆ	ಮಾಡುವವು	ಮಾಡ್ಯಾವು	ಮಾಡುವವು	ಮಾಡವು	

"ಇ, ಎ"ಕಾರಾಂತ ಧಾತುಗಳ ಉದಾಹರಣೆ—"ನುಡಿ."

I. ಅಪೂರ್ಣಕ್ರಿಯೆ.

1. ಅವ್ಯಯಾತ್ಮಕ ರೂಪಗಳು. ಭಾವರೂಪ 1.) ನುಡಿಯ 2.) ನುಡಿಯಲು 3.) ನುಡಿಯಲಿಕ್ಕೆ

2. ನಾಮಾತ್ಮಕ ರೂಪಗಳು.

…………	ವರ್ತಮಾನ	ಭೂತ	ಭವಿಷ್ಯತ್ತು	ನಿಷೇಧ
ನ್ಯೂನರೂಪ	ನುಡಿಯುತ್ತಾ	ನುಡಿದು	…………	ನುಡಿಯದೆ
ಕೃದ್ವಾಚಿ	…………	ನುಡಿದ	ನುಡಿಯುವ	ನುಡಿಯದ
ಕೃದ್ವಾಚಕ ನಾಮ	…………	ನುಡಿದವನು ಇತ್ಯಾದಿ	ನುಡಿಯುವವನು ಇತ್ಯಾದಿ	ನುಡಿಯದವನು ಇತ್ಯಾದಿ
ಕ್ರಿಯಾನಾಮ	…………	ನುಡಿದ್ದು	ನುಡಿಯುವದು, ನುಡಿಯೋಣ	ನುಡಿಯದ್ದು

II. ಪೂರ್ಣಕ್ರಿಯಾಪದ.

(ಪುರುಷಾತ್ಮಕ ರೂಪಗಳು)

	ಸರ್ವನಾಮ		ವರ್ತಮಾನ	ಭೂತ	ಭವಿಷ್ಯತ್ತು	ಭಾವಿ	ನಿಷೇಧ	ವಿಧಿ
ಏಕವಚನ	ಉ. ………	ನಾನು	ನುಡಿಯುತ್ತೇನೆ	ನುಡಿದೆನು	ನುಡಿದೇನು	ನುಡಿಯುವೆನು	ನುಡಿಯೆನು	ನುಡಿಯುವೆ
	ಮ. ………	ನೀನು	ನುಡಿಯುತ್ತೀ	ನುಡಿದಿ	ನುಡಿದೀ	ನುಡಿಯುವಿ	ನುಡಿಯೆ	ನುಡಿ
	ಪ್ರ. ಪು.…	ಅವನು	ನುಡಿಯುತ್ತಾನೆ	ನುಡಿದನು	ನುಡಿದಾನು	ನುಡಿಯುವನು	ನುಡಿಯನು	ನುಡಿಯಲಿ
	ಸ್ತ್ರೀ …	ಅವಳು	ನುಡಿಯುತ್ತಾಳೆ	ನುಡಿದಳು	ನುಡಿದಾಳು	ನುಡಿಯುವಳು	ನುಡಿಯಳು	
	ನಪುಂ.	ಅದು	ನುಡಿಯುತ್ತದೆ	ನುಡಿಯಿತು	ನುಡಿದೀತು	ನುಡಿಯುವದು	ನುಡಿಯದು	
ಬಹುವಚನ	ಉ. ………	ನಾವು	ನುಡಿಯುತ್ತೇವೆ	ನುಡಿದೆವು	ನುಡಿದೇವು	ನುಡಿಯುವೆವು	ನುಡಿಯೆವು	ನುಡಿಯುವ, ನುಡಿ
	ಮ. ………	ನೀವು	ನುಡಿಯುತ್ತೀರಿ	ನುಡಿದಿರಿ	ನುಡಿದೀರಿ	ನುಡಿಯುವಿರಿ	ನುಡಿಯರಿ	ನುಡಿಯಿರಿ [ಯೋಣ
	ಪ್ರ. ಪು. ಸ್ತ್ರೀ.	ಅವರು	ನುಡಿಯುತ್ತಾರೆ	ನುಡಿದರು	ನುಡಿದಾರು	ನುಡಿಯುವರು	ನುಡಿಯರು	ನುಡಿಯಲಿ
	ನಪುಂ.	ಅವು	ನುಡಿಯುತ್ತವೆ	ನುಡಿದವು	ನುಡಿದಾವು	ನುಡಿಯುವವು	ನುಡಿಯವು	

VI. ಅವ್ಯಯಪ್ರಕರಣ.

51. ಪ್ರ. "ಅವ್ಯಯಶಬ್ದ"ವೆಂದರೇನು?

ಉ. ಲಿಂಗಸೂಚಕ ವಚನಸೂಚಕಗಳಾದ ಪ್ರತ್ಯಯಗಳನ್ನು ಎಂದಿಗೂ ಹೊಂದದ ಶಬ್ದಗಳಿಗೆ "ಅವ್ಯಯಶಬ್ದ"ವೆಂಬ ಹೆಸರು.

52. ಪ್ರ. ಅವು ಎಷ್ಟು ವಿಧವು?

ಉ. "ಕ್ರಿಯಾವಿಶೇಷಣಗಳು", "ಉಪಸರ್ಗಗಳು", "ಸಮುಚ್ಚಾಯಕಾವ್ಯಯಗಳು", "ಅನುಕರಣಶಬ್ದಗಳು", ಈ 4 ವಿಧವು.

53. ಪ್ರ. "ಕ್ರಿಯಾವಿಶೇಷಣ ಅವ್ಯಯಗಳು" ಯಾವವು?

ಉ. ಕ್ರಿಯೆಗಳು ನಡೆಯುವ ಸ್ಥಳ, ಕಾಲ, ರೀತಿಗಳನ್ನು ಹೇಳುವ ಅವ್ಯಯಶಬ್ದಗಳಿಗೆ "ಕ್ರಿಯಾವಿಶೇಷಣ ಅವ್ಯಯ"ಗಳೆಂಬ ಹೆಸರು. ಅವು "ಸ್ಥಳವಾಚಕ", "ಕಾಲವಾಚಕ", "ರೀತಿವಾಚಕ", ಈ 3 ವಿಧವಾಗಿವೆ.

54. ಪ್ರ. "ಸ್ಥಳವಾಚಕ ಕ್ರಿಯಾವಿಶೇಷಣಗಳು" ಯಾವವು?

ಉ. ಎಲ್ಲಿ, ಇಲ್ಲಿ, ಅಲ್ಲಿ, ಇತ್ತ, ಅತ್ತ, ಈಚೆ, ಆಚೆ, ಸುತ್ತ, ಮೇಲೆ, ಕೆಳಗೆ, ಒಳಗೆ, ಹೊರಗೆ, ಮುಂದೆ, ಹಿಂದೆ — ಇತ್ಯಾದಿ.

55. ಪ್ರ. "ಕಾಲವಾಚಕ ಕ್ರಿಯಾವಿಶೇಷಣಗಳು" ಯಾವವು?

ಉ. ಎಂದು, ಇಂದು, ಅಂದು, ಈಗ, ಆಗ, ಮೊನ್ನೆ, ನಿನ್ನೆ, ಈ ಹೊತ್ತು, ನಾಳೆ, ಬೆಳಿಗ್ಗೆ, ಸಂಜೆ, ಮುಂಚೆ, ತರುವಾಯ, ಸದ್ಯ, ದಿನಾಲು, ಸರ್ವದಾ, ಇನ್ನು, ಮತ್ತು, ಒಮ್ಮೆ — ಇತ್ಯಾದಿ.

56. ಪ್ರ. "ರೀತಿವಾಚಕ ಕ್ರಿಯಾವಿಶೇಷಣಗಳು" ಯಾವವು?

ಉ. ಹ್ಯಾಗೆ, ಹೀಗೆ, ಹಾಗೆ, ಇಂತು, ಅಂತು, ಬೇಗ, ಮೆಲ್ಲಗೆ, ನೆಟ್ಟಗೆ, ಕೆಂಪಗೆ, ಬೆಳ್ಳಗೆ, ತಣ್ಣಗೆ, ನುಣ್ಣಗೆ, ಸರಾಸರಿ — ಇತ್ಯಾದಿ.

57. ಪ್ರ. "ಉಪಸರ್ಗಗಳು" ಯಾವವು?
ಉ. ಓಸ್ಕರ, ತುಸುಕ, ತನಕ, ವರೆಗೆ, ಅಂತೆ, ಹಾಗೆ, ಸಂಗಡ, ಕೂಡ, ಹೊರ್ತು, — ವಿಷಯ, ಕಾರಣ, ನಿಮಿತ್ತ — ಇತ್ಯಾದಿಗಳು.

58. ಪ್ರ. "ಸಮುಚ್ಚಾಯಕಾವ್ಯಯಗಳು" ಯಾವವು?
ಉ. ನಿಪಾತಗಳು:—ಉ, ಆ, ಏ, ಓ, ರೆ, ರೂ.
ಶಬ್ದಗಳು:—ಸಹ, ಸುದಾ, ಅಥವಾ, ಪರಂತು — ಇತ್ಯಾದಿ.

59. ಪ್ರ. "ಅನುಕರಣ ಶಬ್ದಗಳು" ಯಾವವು?
ಉ. ಕೂಗುಗಳು — ಅಂಬಾ, ಮ್ಯಾ, ಕೋ ಕೋ, ಇತ್ಯಾದಿ.
ನಾದಗಳು — ಘಣೀ ಘಂಣನೇ, ಕಿಣಿಕಿಣಿ, ಇತ್ಯಾದಿ.
ಸಪ್ಪಳಗಳು — ಪರಪರನೆ, ಲೊಟ ಲೊಟನೆ, ಇತ್ಯಾದಿ.
ಸಂಬುದ್ಧ್ಯವ್ಯಯಗಳು — ಎಲೇ, ಹೋ, ಓ. ಇತ್ಯಾದಿ.
ಭಾವವಾಚಕ ಅನುಕರಣಾವ್ಯಯಗಳು — ಅಯ್ಯೋ, ಅಹಹ, ಇತ್ಯಾದಿ.

ವಾಕ್ಯಖಂಡ.

60. ಪ್ರ. "ವಾಕ್ಯ" ವೆಂದರೇನು?
ಉ. ಒಂದು ಸಂಪೂರ್ಣ ಆಲೋಚನೆಯನ್ನು ಹೇಳುವ ಮಾತು ವಾಕ್ಯವೆಂದೆನಿಸುವದು.

61. ಪ್ರ. ವಾಕ್ಯದಲ್ಲಿ ಮುಖ್ಯ ಪದಗಳು ಯಾವವು?
ಉ. ಆಖ್ಯೆಪದ ಆಖ್ಯಾತಪದವೆಂಬ 2 ಪದಗಳು ವಾಕ್ಯದಲ್ಲಿ ಮುಖ್ಯವೇ. ಹ್ಯಾಗಂದರೆ ವಾಕ್ಯದಲ್ಲಿ ಹೇಳಿರುವ ಆಲೋಚನೆಯು ಯಾವ ವಸ್ತುವನ್ನು ಉದ್ದೇಶಿಸುವದೋ, ಅದೇ ಆಖ್ಯೆ ಎಂದೆನ್ನಿ

ಸುವದು. ಆದರೆ ಈ ಪ್ರಕಾರ ಉದ್ದೇಶಿಸಿದ ವಸ್ತುವಿನ ವಿಷಯವಾಗಿ ಒಂದು ಕ್ರಿಯೆಯನ್ನಾಗಲಿ ಒಂದು ಲಕ್ಷಣವನ್ನಾಗಲಿ ಹೇಳುವ ಪದವು "ಆಖ್ಯಾತಪದ"ವೆಂದೆನ್ನಿಸುವದು. ಉದಾ. ಅರಸನು ಆಳುತ್ತಾನೆ. ಲೋಕವು ದೊಡ್ಡದು. — ಸಂಸ್ಕೃತ ಪಂಡಿತರು ಆಖ್ಯೆಪದಕ್ಕೆ "ಉದ್ದಿಶ್ಯಪದ"ವೆಂದು, ಆಖ್ಯಾತಪದಕ್ಕೆ "ವಿಧೇಯಪದ"ವೆಂದು ಅನ್ನುವರು.

62. ಪ್ರ. ಆಖ್ಯಾತಪದವು "ವಿಧೇಯಪದ"ವೆಂದೆನ್ನಿಸುವದು ಯಾಕೆ?
ಉ. ವಾಕ್ಯದಲ್ಲಿ ಆಖ್ಯಾತಪದವು ಆಖ್ಯೆ ಎಂಬ ಉದ್ದಿಶ್ಯ ಪದದ ಉತ್ತರದಲ್ಲಿ ಶೇರಿ, ಪುರುಷ ಲಿಂಗ ವಚನಗಳ ವಿಷಯವಾಗಿ ಅದಕ್ಕೆ ವಿಧೇಯವಾಗಿರುವದು. ಹ್ಯಾಗಂದರೆ ಆಖ್ಯೆಪದಕ್ಕೆ ಯಾವ ಪುರುಷ ಲಿಂಗ ವಚನ ಇರುವದೋ ಅದೇ ಆಖ್ಯಾತಪದಕ್ಕೂ ಬರುವದು. ಉದಾ.

		ಏಕವಚನ.	ಬಹುವಚನ.
ಉತ್ತಮ ಪುರುಷ		— ನಾನು ಮಾಡಿದೆನು	ನಾವು ಮಾಡಿದೆವು
ಮಧ್ಯಮ ಪು.		— ನೀನು ಮಾಡಿದಿ	ನೀವು ಮಾಡಿದಿರಿ
ಪ್ರಥಮ ಪು.	ಪುಂ	— ಹುಡುಗನು ಮಾಡಿದನು	ಹುಡುಗರು ಮಾಡಿದರು
	ಸ್ತ್ರೀ.	— ಹುಡುಗಿ ಮಾಡಿದಳು	
	ನಪುಂ.	— ಕೈ ಮಾಡಿತು	ಕೈಗಳು ಮಾಡಿದವು

63. ಪ್ರ. ಆಖ್ಯಾತಪದವು ಎಷ್ಟು ವಿಧವು?
ಉ. ಆಖ್ಯಾತಕ್ರಿಯೆ, ಆಖ್ಯಾತ ಲಕ್ಷಣ, ವಿಧೇಯ ವಿಶೇಷಣವೆಂಬ 3 ವಿಧವು.
ಉದಾ. ಆಖ್ಯಾತಕ್ರಿಯೆ — ಅರಸನು ಆಳುತ್ತಾನೆ, ಪ್ರಜೆಗಳು ಆಳಲ್ಪಡುತ್ತಾರೆ.

ಆಖ್ಯಾತ ಲಕ್ಷಣ — ಹುಡುಗರು ಬುದ್ಧಿಹೀನರಾಗಿದ್ದಾರೆ.
ವಿಧೇಯ ವಿಶೇಷಣ — ನಾವು ಮನುಷ್ಯರು, ಮನುಷ್ಯರು ಪಾಪಿಷ್ಟರೇ.

64. ಪ್ರ. ಆಖ್ಯಾತ ಕ್ರಿಯಾಪದಗಳನ್ನು ಆಖ್ಯೇಪದಗಳಿಗೆ ಅನ್ವಯಿಸುವದರಲ್ಲಿ ಮುಖ್ಯ ಪ್ರಯೋಗಗಳು ಯಾವವು?

ಉ. "ಕರ್ತರಿಪ್ರಯೋಗ, ಕರ್ಮಣಿಪ್ರಯೋಗ"ವೆಂಬ ಈ ಎರಡು.

65. ಪ್ರ. ಕರ್ತರಿಪ್ರಯೋಗವು ಹ್ಯಾಗೆ?

ಉ. ಕ್ರಿಯೆಯನ್ನು ಮಾಡುವ ವಸ್ತು ಅದರ "ಕರ್ತೃ"ವೆಂದೆನ್ನಿಸುವದು. ಆ ಕರ್ತೃವನ್ನು ಹೇಳುವ ಪದವು "ಕರ್ತೃಪದ"ವೆಂದು ವರ್ಣಿಸುವದು. ಆದರೆ ಕರ್ತೃಪದವನ್ನು ವಾಕ್ಯದಲ್ಲಿ ಉದ್ದಿಶ್ಯ ಮಾಡಿ ಅದರ ಪುರುಷ ಲಿಂಗ ವಚನಕ್ಕೆ ಆಖ್ಯಾತ ಕ್ರಿಯಾಪದವನ್ನು ವಿಧೇಯ ಮಾಡುವದೇ ಕರ್ತರಿಪ್ರಯೋಗವೆಂದು ವ್ಯವಹರಿಸುವದು. ಉದಾ. ಅರಸನು ಆಳುತ್ತಾನೆ

66. ಪ್ರ. ಕರ್ಮಣಿ ಪ್ರಯೋಗವು ಹ್ಯಾಗೆ?

ಉ. ಕ್ರಿಯೆಯನ್ನು ಪಡುವ ವಸ್ತು "ಕರ್ಮ"ವೆಂದೆನ್ನಿಸುವದು, ಅದನ್ನು ಹೇಳುವ ಪದವು "ಕರ್ಮಪದವೇ" ಉದಾ. ಅರಸನು ಪ್ರಜೆಗಳನ್ನು ಆಳುತ್ತಾನೆ. ಆದರೆ ಕರ್ಮ ಪದವನ್ನು ವಾಕ್ಯದಲ್ಲಿ ಉದ್ದಿಶ್ಯ ಮಾಡಿ, ಅದರ ಪುರುಷ ಲಿಂಗ ವಚನಕ್ಕೆ ಆಖ್ಯಾತ ಕ್ರಿಯಾಪದವನ್ನು ವಿಧೇಯ ಮಾಡುವದೇ "ಕರ್ಮಣಿಪ್ರಯೋಗ"ವೆಂದು ವ್ಯವಹರಿಸುವದು. ಉದಾ. ಅರಸನಿಂದ ಪ್ರಜೆಗಳು ಆಳಲ್ಪಡುತ್ತಾರೆ.

67. ಪ್ರ. "ಕಾರಕ" ವೆಂದರೇನು?

ಉ. ವಾಕ್ಯದಲ್ಲಿ ಯಾವ ಪದಗಳಿಂದ ಆಖ್ಯಾತದ ಅರ್ಥವು ಸಂಪೂರ್ಣವಾಗುವದೋ ಅವು "ಕಾರಕಪದ"ಗಳೆಂದೆನ್ನಿಸುವವು.

68. ಪ್ರ. ಅವು ಹೇಳುವ ಕಾರಕಾರ್ಥಗಳು ಯಾವವು?

ಉ. ಕರ್ಮ, ಮೂಲ, ಸಂಪ್ರಯೋಗ, ಸ್ಥಳ, ಕಾಲ, ರೀತಿ—ಇವು ಮುಖ್ಯವಾದ ಕಾರಕಾರ್ಥಗಳೇ.

69. ಪ್ರ. ಕಾರಕಾರ್ಥಗಳನ್ನು ಹೇಳುವ ಪದಗಳು ಯಾವವು?

ಉ. ನಾಮಪದಗಳಿಗೂ, ಸರ್ವನಾಮಗಳಿಗೂ, ಬರುವ ವಿಭಕ್ತಿಗಳಲ್ಲಿ ದ್ವಿತಿಯೆ, ತೃತೀಯೆ, ಚತುರ್ಥಿ, ಸಪ್ತಮಿ—ಈ ವಿಭಕ್ತಿ ರೂಪಗಳು ಕಾರಕಾರ್ಥಗಳನ್ನು ಹೇಳುತ್ತವೆ. ಅದು ಕಾರಣ ಅವುಗಳಿಗೆ "ಕಾರಕವಿಭಕ್ತಿ"ಗಳೆಂಬ ಹೆಸರು.

70. ಪ್ರ. ಕಾರಕ ಪದಗಳಿಗೆ ಪ್ರತಿಯಾಗಿ ಇನ್ನು ಯಾವ ಶಬ್ದಗಳು ಪ್ರಯೋಗಿಸುವವು?

ಉ. ಕಾರಕ ವಿಭಕ್ತಿಗಳು ಸಾಧಾರಣವಾಗಿ ಹೇಳುವ ಅರ್ಥಗಳನ್ನು ವಿಶೇಷಿಸಿ ಹೇಳುವದಕ್ಕೆ ನಾಮಪದಗಳ ಮುಂದೆ ಉಪಸರ್ಗಗಳು ಶೇರುವವು. (ಅವುಗಳನ್ನು ಹಿಂದೆ 63ನೇ ಉತ್ತರದಲ್ಲಿ ನೋಡು). ಇದಲ್ಲದೆ ಸ್ಥಳ ಕಾಲ ರೀತಿವಾಚಕ ಕ್ರಿಯಾವಿಶೇಷಣ ಅವ್ಯಯಗಳು ಕಾರಕಪದಗಳಿಗೆ ಪ್ರತಿಯಾಗಿ ಪ್ರಯೋಗಿಸುವವು. (ಅವುಗಳನ್ನು ಹಿಂದೆ 60. 61. 62. ಉತ್ತರಗಳಲ್ಲಿ ನೋಡು). ಮತ್ತು ಅವ್ಯಯ ಕ್ರಿಯಾಪದಗಳಾದ ಭಾವರೂಪ, ನ್ಯೂನರೂಪ, ಕ್ರಿಯಾನಾಮಗಳು ಸಹ ಕಾರಕಾರ್ಥಗಳನ್ನೂ ಕ್ರಿಯಾವಿಶೇಷಣಾರ್ಥಗಳನ್ನೂ ಹೇಳುವದಕ್ಕೆ ಪ್ರಯೋಗಿಸುವವು. ಇವುಗಳ ಪ್ರಯೋ

ಗಗಳ ವಿವರವನ್ನು ಶ್ಯಾಲಾವ್ಯಾಕರಣದಲ್ಲಿ ನೋಡಿ ತಿಳಕೊಳ್ಳ ತಕ್ಕದ್ದು.

71. ಪ್ರ. ವಿಶೇಷಣಗಳೆಂದರೇನು?

ಉ. ಅಖ್ಯೆ ಆಖ್ಯಾತ ಪದಗಳಾಗಿ ಆಗಲಿ ಇಲ್ಲವೆ ಕಾರಕಪದಗಳಾಗಿ ಆಗಲಿ ವಾಕ್ಯದಲ್ಲಿ ಪ್ರಯೋಗಿಸಿದ ನಾಮಪದಗಳು ಹೇಳುವ ವಸ್ತುಗಳ ಗುಣ ಸಂಖ್ಯಾ ವೊದಲಾದ ಲಕ್ಷಣಗಳನ್ನು ವಿಶೇಷಿಸುವ ಪದಗಳಿಗೆ "ವಿಶೇಷಣ"ಗಳೆಂಬ ಹೆಸರು. ಇಂಥಾ ವಿಶೇಷಣದಿಂದ ವಿಶೇಷಿಸಿದ ಪದವು "ವಿಶೇಷ್ಯಪದ"ವೆಂದು ವರ್ಣಿಸುವದು.

72. ಪ್ರ. ವಿಶೇಷಣಗಳು ಎಷ್ಟು ವಿಧವು?

ಉ. 1. ಸರ್ವನಾಮ ವಿಶೇಷಣ, 2. ಸಂಖ್ಯಾವಾಚಕ ವಿಶೇಷಣ, 3. ಗುಣವಾಚಕ ವಿಶೇಷಣ, 4. ಕೃದ್ವಾಚಕ ವಿಶೇಷಣ, 5. ಅಭೇದಸಂಬಂಧ ವಿಶೇಷಣ, 6. ಲುಕ್ಸಮಾಸ ವಿಶೇಷಣ, 7. ಉಪನಾಮ ವಿಶೇಷಣ, 8. ಕೃದ್ವಾಚಿಪ್ರಯುಕ್ತ ವಿಶೇಷಣವೆಂಬ 8 ವಿಧವು. ಉದಾ.

1. ಯಾವ ಹುಡುಗ, ಎಂಥ ಪುಸ್ತಕ, ಈ ಹುಡಗ, ಅಂಥ ಪುಸ್ತಕ.
2. ಎರಡು ಕೈಗಳು, ಸಾವಿರ ಜನರು, ನಾಲ್ಕನೆ ತಾಸು, ಕೆಲವು ದಿವಸ.
3. ದೊಡ್ಡ ಆನೆ, ತಿಳಿ ನೀರು, ಉತ್ತಮ ದೇವರು, ಶುದ್ಧ ಮನಸ್ಸು.
4. ಅಳುವ ಕೂಸು, ಹೋದ ವರುಷ, ಕಾಣದ ಆತ್ಮ.

5. ಮಗನ ತಂದೆ, ಮರದ ಕೊಂಗೆ, ಮಾವಿನ ಹಣ್ಣು, ಮಣ್ಣಿನ ಕೊಡ.
6. ಗುರುಬೋಧ, ಮೋಕ್ಷಮಾರ್ಗ, ಎಮ್ಮೆಹಾಲು, ಜಾಲಿಗಿಡ.
7. ತಿಮ್ಮಗೌಡ, ಮೈಸೂರ ದೇಶ, ಸಾವುಕಾರ ದೇವದಾಸ.
8. ಕರ್ತನಾದ ದೇವರು, ವಿಕಾರವಲ್ಲದ ಕಲ್ಲು, ಯುಕ್ತಿಯುಳ್ಳ ನರಿ.

ಬುದ್ಧಿ ಇಲ್ಲದ ಹುಡಿಗಿ, ಸಿಂಹವೆಂಬ ಮೃಗರಾಜ.

73. ಪ್ರ. ವಾಕ್ಯಗಳು ಎಷ್ಟು ವಿಧವು?

ಉ. "ಪ್ರಧಾನವಾಕ್ಯ, ಉಪವಾಕ್ಯ"ವೆಂಬ 2 ವಿಧವು. ಹ್ಯಾಗಂದರೆ

ಮತ್ತೊಂದು ವಾಕ್ಯಕ್ಕೆ ಆಧೀನವಾಗಿ ಅದರ ಕಾರಕ ಪದಗಳ ಒಂದರ ಸ್ಥಳದಲ್ಲಿ ಶೇರುವ ವಾಕ್ಯವೇ "ಉಪವಾಕ್ಯ"ವೆಂದೆನ್ನಿಸುವದು. ಆದರೆ ಉಪವಾಕ್ಯವು ಯಾವ ವಾಕ್ಯಕ್ಕೆ ಆಧೀನವಾಗಿರುವದೋ ಅದು "ಪ್ರಧಾನವಾಕ್ಯ"ವೆಂದು ವರ್ಣಿಸುವದು. ಉಪವಾಕ್ಯಗಳು ಅಪೂರ್ಣ ಪೂರ್ಣವೆಂಬ 2 ವಿಧವು.

74. ಪ್ರ. ಅಪೂರ್ಣ ಉಪವಾಕ್ಯಗಳು ಯಾವವು?

ಉ. ಯಾವ ಉಪವಾಕ್ಯಗಳ ಅಂತ್ಯ ಕ್ರಿಯಾಪದಕ್ಕೆ ಪುರುಷಾತ್ಮಕ ರೂಪವಿರುವದಿಲ್ಲವೋ ಅವು ಅಪೂರ್ಣ ಉಪವಾಕ್ಯಗಳೆಂದೆನ್ನಿಸುವವು. ಉದಾ. ಮನುಷ್ಯರು ಸಾಯುವದು ದೇವರು ನೇಮಿಸಿದ ಕಟ್ಟಳೆ. ಸೂರ್ಯನು ಮೂಡಲು, ಕತ್ತಲೆ ಓಡಿ ಹೋಗುವದು. ಗಾಳಿ ಬೀಸಿ, ಹಣ್ಣುಗಳು ಮರದಿಂದ ಉದುರಿದವು. ಮಗನು ತಪ್ಪು ಮಾಡಿದ ಕಾರಣ, ತಂದೆ ಶಿಕ್ಷೆ ಕೊಟ್ಟನು.

75. ಪ್ರ. ಪೂರ್ಣ ಉಪವಾಕ್ಯಗಳು ಯಾವವು?

ಉ. ಯಾವ ಉಪವಾಕ್ಯಗಳ ಅಂತ್ಯ ಕ್ರಿಯಾಪದಕ್ಕೆ ಪುರುಷಾತ್ಮಕ ರೂಪವಿರುವದೋ, ಅವು ಪೂರ್ಣ ಉಪವಾಕ್ಯವೆಂದೆನ್ನಿಸುವವು. ಅವುಗಳಲ್ಲಿ ಸಂಬಂಧಿತ ಉಪವಾಕ್ಯ, ಸೂಚಿತ ಉಪವಾಕ್ಯವೆಂಬ 2 ವಿಧವು.

1. ಉಪವಾಕ್ಯದಲ್ಲಿ ಪ್ರಶ್ನಾರ್ಥಕ ಶಬ್ದವನ್ನೂ, ಪ್ರಧಾನವಾಕ್ಯದಲ್ಲಿ ದರ್ಶಕ ಶಬ್ದವನ್ನೂ ಸೇರಿಸುವದರಿಂದ ಸಂಬಂಧಿತ ಉಪವಾಕ್ಯವು ಪ್ರಧಾನವಾಕ್ಯಕ್ಕೆ ಸಮುಚ್ಚಯವಾಗುವದು. ಉದಾ. — ಯಾವನು ಪಾಪ ಮಾಡುವನೋ, ಅವನು ತಾಪ ಪಡುವನು. ಎಂಥವರು ನಿನ್ನ ಗೆಳಿಯರೋ, ಅಂಥವನು ನೀನೇ. ಅರಸನು ಹ್ಯಾಗೋ ಹಾಗೆಯೇ ಪ್ರಜೆಗಳು ಇರುತ್ತಾರೆ.

2. "ಎಂದು, ಅಂತ, ಎಂಬ, ಎಂಬದು, ಎಂಬದಾಗಿ" ಮೊದಲಾದ "ಅನ್ನು, ಎನ್ನು" ಧಾತುಗಳ ರೂಪಗಳಿಂದ ಪ್ರಧಾನವಾಕ್ಯಗಳಿಗೆ ಪೋಣಿಸಿದ ಉಪವಾಕ್ಯಗಳು ಸೂಚಿತ ಉಪವಾಕ್ಯಗಳೆಂದೆನ್ನಿಸುವವು.

ಉದಾ. — ಸುಳ್ಳು ಆಡ ಬಾರದು ಎಂದು ಎಲ್ಲರು ತಿಳಿಯುತ್ತಾರೆ. ಯಾಕಂದರೆ ಸುಳ್ಳು ಆಡುವದರಿಂದ ಪಾಪ ಬರುವದು ಎಂಬ ನಿರ್ಣಯವನ್ನು ದೇವರು ಎಲ್ಲ ಮನುಷ್ಯರ ಹೃದಯದಲ್ಲಿ ಬರೆದಿಟ್ಟನು. ಅಪರಾಧಕ್ಕೆ ದಂಡ ತಕ್ಕದ್ದು ಎಂಬದಕ್ಕೆ ಸಜ್ಜನರು ಒಪ್ಪಿ ಕೊಳ್ಳುತ್ತಾರೆ.

~~~ ಸಮಾಪ್ತಿ. ~~~
~~~

FIRST CATECHISM

OF

Canarese Grammar

ಕಂನಡ ಬಾಲವ್ಯಾಕರಣ.

SECOND REVISED EDITION.
PUBLISHED BY ORDER OF THE DIRECTOR
OF PUBLIC INSTRUCTION.

MANGALORE:
GOVERNMENT SCHOOL-BOOK DEPOT.
1865.